## ಆಹಾ ಸುದ್ದಿ!

★ ಸಸಿತೋಟ

ಕಾಂಗೊ ಗಣರಾಜ್ಯದಲ್ಲಿ ಗಾಯಕನೊಬ್ಬ ಕಾಂಡೋಮ್‌ಗಳನ್ನು ಬಳಸಿ ವಿನ್ಯಾಸ ಮಾಡಿದ ಉಡುಪು ಧರಿಸಿದ್ದು ಅಲ್ಲಿ ಭಾರಿ ಕೋಲಾಹಲಕ್ಕೆ ಕಾರಣವಾಗಿದೆಯಂತೆ. ಇವು ಬಳಸಿದ ಕಾಂಡೋಮ್‌ಗಳಲ್ಲ, ಕಾಂಡೋಮ್‌ಗಳನ್ನು ಬಳಸಿ ವಿನ್ಯಾಸ ಮಾಡಿದ್ದು ಎಂದರೂ ಗಲಾಟೆಗೆ ಕಮ್ಮಿಯಾಗಿಲ್ಲವಂತೆ. ಉಚಿತ ಪರೀಕ್ಷೆಗಾದರೂ ಅವಕಾಶ ಕೊಡಬಹುದಿತ್ತು.



ನ್ಯಾಯಾಧೀಶರು ತೀರ್ಪು ಕೊಡುವುದಲ್ಲದೇ ಪೊಲೀಸ್ ಕೆಲಸವನ್ನೂ ಮಾಡಿದ ಘಟನೆ ವಾಷಿಂಗ್ಟನ್ ಕೋರ್ಟ್‌ನಲ್ಲಿ ನಡೆದಿದೆಯಂತೆ. ಕೈಗೆ ಕೋಳ ಹಾಕಿಸಿಕೊಂಡ ಇಬ್ಬರು ಕೈದಿಗಳು ತಪ್ಪಿಸಿಕೊಂಡು ಓಡುವುದನ್ನು ನೋಡಿದ ನ್ಯಾ.ಬಜರ್ಡ್ ತಮ್ಮ ಸಮವಸ್ತ್ರ ಕಳಚಿ ಹಾಕಿ, ವೇಗವಾಗಿ ಓಡಿ ಕೈದಿಗಳನ್ನು ಎಳೆದು ನಿಲ್ಲಿಸಿದರಂತೆ. ಸಿನಿಮಾದಲ್ಲಿ ತೋರಿಸುವಂತೆ ಪೊಲೀಸರು ನಂತರ ಎಂಟ್ರಿ ಕೊಟ್ಟರಂತೆ.



ಬ್ರಿಟನ್ನಿನಲ್ಲಿ ಸದ್ಯ ಮೈ ಕೊರೆಯುವಂತಹ ಚಳಿ. ಈ ಚೆಲುವೆ ಚಳಿಯಿಂದ ತನ್ನ ಮೂಗು ರಕ್ಷಿಸಿಕೊಳ್ಳಲು ಕಟ್ಟಿಕೊಂಡಿರುವ ಈ 'ನೋಸ್ ವಾರ್ಮರ್' ಈಗ ವೈರಲ್ ಆಗಿದ್ದು, ಯಾರೋ ಮಾಡಲು ಹೋದ ತಮಾಷೆ ಈಗ ವಹಿವಾಟು ಏರಿಕೆಗೆ ಕಾರಣವಾಗಿದೆಯಂತೆ. ತಮಾಷೆಗೂ ಮಿತಿ ಇರಬೇಕಿತ್ತು ಎಂದು ಬ್ಯುಸಿನೆಸ್ ಕಳಕೊಂಡವರು ಕೈಕೈ ಹಿಸುಕಿಕೊಳ್ಳುತ್ತಿರಬಹುದು.

ಆಸ್ಟ್ರೇಲಿಯ ಪ್ರಾಣಿ ಸಂಗ್ರಹಾಲಯದಲ್ಲಿ ಸಲಿಂಗಿ ಪೆಂಗ್ವಿನ್ ಜೋಡಿಯೊಂದು ಬಾಡಿಗೆ ಮೊಟ್ಟೆಗೆ ಕಾವು ನೀಡಿ ಮರಿ ಮಾಡಿದೆಯಂತೆ. ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆಯ ಪಲ್ಲಟ ಎಂದು ಸದ್ಯ ಪೆಂಗ್ವಿನ್ ಸಮುದಾಯದಿಂದ ಪ್ರತಿಭಟನೆ ನಡೆದಿರುವ ಬಗ್ಗೆ ವರದಿಯಾಗಿಲ್ಲವಂತೆ.



ಅಮೆರಿಕದ ಪಾರ್ಕ್ ಒಂದರಲ್ಲಿ ಛಾಯಾಚಿತ್ರಗ್ರಾಹಕನೊಬ್ಬ ಆಕಸ್ಮಿಕವಾಗಿ ಹೊಡೆದ ಈ ಚಿತ್ರ ಈಗ ಅಂತರ್ಜಾಲದಲ್ಲಿ ವೈರಲ್ ಆಗಿದೆ. ಜೋಡಿಯೊಂದು ಪ್ರೇಮದ ನಿವೇದನೆಯನ್ನೋ, ಮದುವೆಯ ಪ್ರಸ್ತಾಪವನ್ನೋ ಮಾಡಿದ ಕ್ಷಣ ಕ್ಯಾಮೆರಾದಲ್ಲಿ ಸೆರೆಯಾಗಿ ಫೇಸ್‌ಬುಕ್ಕಿಗೂ ಹಂಚಿ ಹೋಗಿದೆ. ಆದರೆ ಎಷ್ಟು ಹುಡುಕಿದರೂ ಜೋಡಿ ಮಾತ್ರ ನಾಪತ್ತೆ. ಸದ್ಯ ಒಂದು ತಂಡವೇ ಈ ಸಾಹಸಕ್ಕೆ ಇಳಿದಿದೆಯಂತೆ. ಕೈತುಂಬ ಕೆಲಸ ಕೊಟ್ಟ ಶ್ರೇಯಸ್ಸು ಈ ಅನಾಮಿಕ ಜೋಡಿಗೆ ಸಲ್ಲಬೇಕು.

ಬೆಲ್ಜಿಯಂನಲ್ಲಿ ವಿಚಿತ್ರ ಘಟನೆಯೊಂದು ನಡೆದಿದೆಯಂತೆ. ಇ–ಸಿಗರೇಟ್ ಅಂಗಡಿಗೆ ಬಂದ 6 ಮಂದಿ ಕಳ್ಳರ ತಂಡ ಹಣಕ್ಕೆ ಬೇಡಿಕೆ ಸಲ್ಲಿಸಿದೆ. ಆದರೆ ಅಂಗಡಿ ಮಾಲೀಕ 'ಸಂಜೆ ಬಂದರೆ ಜಾಸ್ತಿ ಹಣ ಸಂಗ್ರಹವಾಗುತ್ತದೆ' ಎಂದನಂತೆ. ಪೊಲೀಸರು ಇದನ್ನು ನಂಬದೇ ಆಲಸ್ಯದಿಂದ ಕೂತಿದ್ದರಂತೆ. ಕಳ್ಳರು ಮತ್ತೆ ಸಂಜೆ ಬಂದರಂತೆ. 'ತಾಸು ಬಿಟ್ಟು ಬನ್ನಿ' ಎಂದ ಮಾಲೀಕನ ಮಾತು ನಂಬಿದ ಕಳ್ಳರ ತಂಡ ಮತ್ತೆ ಬಂದಾಗ ಪೊಲೀಸರ ಕೈಗೆ ಸಿಕ್ಕಿಬಿತ್ತಂತೆ. ಕಾಮಿಡಿ ಎನ್ನಬೇಕೋ, ಬೆಲ್ಜಿಯಂನ ಅತ್ಯಂತ ಕೆಟ್ಟ ಕಳ್ಳರು ಎನ್ನಬೇಕೋ.. ದಾಖಲೆಯಲ್ಲಂತೂ ಸೇರಿಬಿಟ್ಟಿದ್ದಾರೆ.

